


ನೋಡಿದ. ಸಂಪಕ್ಕಜ್ಜಿ ಬಿಲ್ಕುಲ್ ಒಪ್ಪಲಿಲ್ಲ. ಈ ನಡುವೆ ಶಿಲುಬೆ ಮಲೆಯು ಇಸ್ಪೀಟ್ ಆಡುವವರ, ಜೂಜುಕೋರರ, ಪ್ರೇಮಿಗಳ ಹಾಗೂ ಹಲವು ಅಕ್ರಮಗಳ ತಾಣವಾಗಿದೆಯೆಂದೂ ಶಿಲುಬೆ ಮಲೆಯನ್ನು ನೋಡುವ ನೆಪದಲ್ಲಿ ಅಲ್ಲಿ ಜಮಾಯಿಸುವವರಿಗೆ ಕೆಲವರು ಇವಕ್ಕೆಲ್ಲಾ ಕುಮ್ಮಕ್ಕು ನೀಡುತ್ತಿರುವವರೆಂದು ಸುತ್ತಮುತ್ತಲ ಹಳ್ಳಿಗಳ ರಸ್ತೆಗಳ ಮೇಲೆಲ್ಲಾ ರಾತ್ರೋರಾತ್ರಿ ಕರಪತ್ರಗಳು ಇಟ್ಟಾಡಿದವು. ಹಾಗೆ ಮಾಡಿದ ಗುಂಪೇ ಕೆಲವು ಹಳ್ಳಿಗಳಲ್ಲಿ ಶಿಲುಬೆ ಮಲೆಯನ್ನು ವಿರೋಧಿಸಲು ಕುಮ್ಮಕ್ಕು ಕೊಡತೊಡಗಿತು. ಇದು ಮತ್ತೂ ಮುಂದುವರೆದು ಶಿಲುಬೆ ಮಲೆಯ ಸಮೀಪದಲ್ಲಿದ್ದ